# ಚಟುವಟಿಕೆ ಹಾಳೆ II: ರಣಹದ್ದುಗಳ ಬಗ್ಗೆ ಕೇಳಿ ತಿಳಿಯಿರಿ

ಎ) ರಣಹದ್ದುಗಳ ಬಗ್ಗೆ ನಿಮ್ಮ ಪೋಷಕರು, ಅಜ್ಜ-ಅಜ್ಜಿಯರು ಮತ್ತು ನಿಮ್ಮ ಸಮುದಾಯದ ಇತರ ಹಿರಿಯರೊಂದಿಗೆ ಮಾತನಾಡಿ ಅವರು ಏನು ಹೇಳುತ್ತಾರೆಂದು ತಿಳಿಯಿರಿ. ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ದಾಖಲಿಸಿ:

| ಕೇಳಬೇಕಾದ ಪ್ರಶ್ನೆಗಳು | ನಿಮ್ಮ ಟಿಪ್ಪಣಿಗಳು |
|---|---|
| ನಿಮ್ಮ ನೆರೆಹೊರೆಯಲ್ಲಿ ಎಷ್ಟು ಬಗೆಯ ರಣಹದ್ದುಗಳು ಕಂಡುಬಂದಿವೆ? ಅವುಗಳ ಸ್ಥಳೀಯ ಹೆಸರುಗಳೇನು? | |
| ಈಗ ನಿಮ್ಮ ನೆರೆಹೊರೆಯಲ್ಲಿ ಯಾವುದೇ ರೀತಿಯ ರಣಹದ್ದುಗಳಿವೆಯೇ? ಇಲ್ಲದಿದ್ದರೆ, ಈ ಪಕ್ಷಿಗಳು ಕೊನೆಯದಾಗಿ ಯಾವಾಗ ಕಂಡುಬಂದಿದ್ದವು? | |
| ಈ ಪಕ್ಷಿಗಳ ಬಗ್ಗೆ ಅವರಿಗೆ ನೆನಪಿರುವುದೇನು? ಉದಾಹರಣೆಗೆ, ಅವರು ಸಾಮಾನ್ಯವಾಗಿ ರಣಹದ್ದುಗಳನ್ನು ಎಲ್ಲಿ ನೋಡುತ್ತಿದ್ದರು? ರಣಹದ್ದುಗಳು ಏನನ್ನು ತಿನ್ನುವುದನ್ನು ಅವರು ನೋಡಿದ್ದಾರೆ? ಅವರು ರಣಹದ್ದುಗಳ ಗೂಡುಗಳನ್ನು ನೋಡಿದ್ದಾರೆಯೇ? ಹೌದು ಎಂದಾದರೆ, ಆ ಗೂಡುಗಳನ್ನು ಎಲ್ಲಿ ನೋಡಿದ್ದಾರೆ? | |
| ಈ ಪಕ್ಷಿಗಳ ಬಗ್ಗೆ ಅವರ ಅಭಿಪ್ರಾಯ ಏನು? ಮಾನವರಿಗೆ ರಣಹದ್ದುಗಳು ಎಷ್ಟು ಮುಖ್ಯ ಎಂದು ಅವರು ಭಾವಿಸುತ್ತಾರೆ? ಈ ಪಕ್ಷಿಗಳ ಬಗ್ಗೆ ಅವರು ಯಾವುದೇ ಘಟನೆಗಳನ್ನು ಹಂಚಿಕೊಳ್ಳಬಲ್ಲರೇ? | |
| ರಣಹದ್ದುಗಳ ಬಗ್ಗೆ ಅವರು ನಿಮ್ಮೊಂದಿಗೆ ಹಂಚಿಕೊಳ್ಳಲು ಬೇರೆ ಏನಾದರೂ ಇದೆಯೇ? | |

ಬಿ) ನಿಮ್ಮ ಕುಟುಂಬದವರು ಅಥವಾ ನಿಮ್ಮ ನೆರೆಹೊರೆಯವರು ಪ್ರಾಣಿಗಳನ್ನು (ಹಸು, ಎಮ್ಮೆ, ಕುರಿ ಮತ್ತು ಮೇಕೆಗಳಂತಹ) ಸಾಕುತ್ತಿದ್ದರೆ, ಆ ಪ್ರಾಣಿಗಳಿಗೆ ನೀಡಲಾಗುವ ಔಷಧಿಗಳ ಬಗ್ಗೆ ಅವರನ್ನು ಕೇಳಿ. ಸಾಧ್ಯವಾದರೆ, ನಿಮ್ಮ ಪ್ರದೇಶದ ಪಶುವೈದ್ಯರು ಅಥವಾ ಪ್ರಾಣಿ ಆರೋಗ್ಯ ಕಾರ್ಯಕರ್ತರೊಂದಿಗೆ ಮಾತನಾಡಿ. ನೀವು ಕಂಡುಕೊಂಡ ಅಂಶಗಳನ್ನು ಕೆಳಗಿನ ಕೋಷ್ಟಕದಲ್ಲಿ ದಾಖಲಿಸಿ:

| ಕೇಳಬೇಕಾದ ಪ್ರಶ್ನೆಗಳು | ನಿಮ್ಮ ಟಿಪ್ಪಣಿಗಳು |
|---|---|
| ಪ್ರಾಣಿಗಳಿಗೆ ಜ್ವರ ಬಂದಾಗ ಅಥವಾ ನೋವು ಉಂಟಾದಾಗ ಅವುಗಳಿಗೆ ಚಿಕಿತ್ಸೆ ನೀಡಲು ಯಾವ ಔಷಧಿಗಳನ್ನು ಬಳಸಲಾಗುತ್ತದೆ? | |
| ಪ್ರಾಣಿಗಳಿಗೆ ಚಿಕಿತ್ಸೆ ನೀಡಲು ಅವರು 'ಡಿಕ್ಲೋಫೆನಾಕ್' ಔಷಧಿಯನ್ನು ಬಳಸಿದ್ದಾರೆಯೇ? ಈಗ ಅವರು ಏನನ್ನು ಬಳಸುತ್ತಾರೆ? | |
| ನಿಮ್ಮ ನೆರೆಹೊರೆಯಲ್ಲಿ ಈಗ ಸತ್ತ ಪ್ರಾಣಿಗಳನ್ನು ಹೇಗೆ ವಿಲೇವಾರಿ ಮಾಡಲಾಗುತ್ತದೆ? | |
| 15-20 ವರ್ಷಗಳ ಹಿಂದೆ ಸತ್ತ ಪ್ರಾಣಿಗಳನ್ನು ಹೇಗೆ ವಿಲೇವಾರಿ ಮಾಡಲಾಗುತ್ತಿತ್ತು? | |
| ಸತ್ತ ಪ್ರಾಣಿಗಳನ್ನು ವಿಲೇವಾರಿ ಮಾಡುವ ವಿಧಾನದಲ್ಲಿ ಏನಾದರೂ ಬದಲಾವಣೆ ಆಗಿದೆಯೇ? ಹಾಗಿದ್ದಲ್ಲಿ ಈ ಬದಲಾವಣೆಗೆ ಕಾರಣವೇನು? | |

**ಯೋಚಿಸಿ ಮತ್ತು ಚರ್ಚಿಸಿ:**

- ಕಣ್ಮರೆಯಾಗುತ್ತಿರುವ ರಣಹದ್ದುಗಳ ಬಗ್ಗೆ ನೀವು ಕಥೆಯನ್ನು ಕೇಳಿದ್ದೀರಿ. ನಿಮ್ಮ ಹಿರಿಯರಿಂದಲೂ ರಣಹದ್ದುಗಳ ಬಗ್ಗೆ ತಿಳಿದುಕೊಂಡಿದ್ದೀರಿ. ಈ ಕಥೆ ಮತ್ತು ನಿಮ್ಮ ಸಂಭಾಷಣೆಗಳಿಂದ ಈ ಪಕ್ಷಿಗಳ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಉಳಿದುಕೊಂಡಿರುವ ಅಂಶಗಳೇನು? ರಣಹದ್ದುಗಳು, ಅವು ತಿನ್ನುವ ಆಹಾರ, ಅವು ಕಣ್ಮರೆಯಾದ ಕಾರಣ ಮತ್ತು ಇದು ಸ್ಥಳೀಯ ಪರಿಸರದ ಮೇಲೆ ಬೀರಿದ ಪ್ರಭಾವ - ಇವೆಲ್ಲವುಗಳ ನಡುವಿನ ಸಂಬಂಧವನ್ನು ತೋರಿಸಲು ಒಂದು ಚಿತ್ರ ಅಥವಾ ನಕ್ಷೆಯನ್ನು ಬಿಡಿಸಲು ಪ್ರಯತ್ನಿಸಿ.
- ಕೆಲವರಿಗೆ ರಣಹದ್ದುಗಳನ್ನು ಕಂಡರೆ ಭಯವಾಗುತ್ತದೆ. ಇವು ಸತ್ತ ಪ್ರಾಣಿಗಳನ್ನು ತಿನ್ನುವುದರಿಂದ ಇವು ಕೊಳಕು ಎಂದು ಇನ್ನು ಕೆಲವರು ಭಾವಿಸುತ್ತಾರೆ. ಕೆಲವು ಸಂಸ್ಕೃತಿಗಳಲ್ಲಿ, ರಣಹದ್ದುಗಳನ್ನು ಪವಿತ್ರವೆಂದು ಪರಿಗಣಿಸಲಾಗುತ್ತದೆ. ನಿಮ್ಮ ಸಮುದಾಯದಲ್ಲಿ ಈ ಪಕ್ಷಿಗಳನ್ನು ಹೇಗೆ ಕಾಣುತ್ತಾರೆ?
- ನಿಮ್ಮ ಪ್ರದೇಶದಲ್ಲಿ ಅನಾರೋಗ್ಯವುಳ್ಳ ಪ್ರಾಣಿಗಳನ್ನು ಗುಣಪಡಿಸಲು ಬಳಸುವ ಔಷಧಿಗಳ ಬಗ್ಗೆ ನೀವು ಮಾಹಿತಿ ಸಂಗ್ರಹಿಸಿದ್ದೀರಿ. ಅದನ್ನು ನಿಮ್ಮ ಸಹಪಾಠಿಗಳೊಂದಿಗೆ ಹಂಚಿಕೊಳ್ಳಿ ಮತ್ತು ನಿಮ್ಮ ಸ್ನೇಹಿತರು ಹಂಚಿಕೊಳ್ಳುವ ವಿಷಯಗಳನ್ನು ಕೇಳಿ. ನೀವು ಒಟ್ಟಾರೆ ಕಲಿತ ಹೊಸ ವಿಷಯಗಳನ್ನು ಬರೆಯಿರಿ.
- ನಿಮ್ಮ ಹಿರಿಯರಿಂದ ರಣಹದ್ದುಗಳ ಬಗ್ಗೆ ನೀವು ಹೊಸದನ್ನು ಕಲಿಯಲು ಸಾಧ್ಯವಾಯಿತೇ? ಅಥವಾ ಕಥೆಯಲ್ಲಿ ಕೇಳಿದ್ದಕ್ಕಿಂತ ಭಿನ್ನವಾದ ವಿಷಯವನ್ನು ನಿಮ್ಮ ಹಿರಿಯರಿಂದ ಕೇಳಿದ್ದೀರಾ? ಅದನ್ನು ಗುರುತು ಮಾಡಿಕೊಳ್ಳಿ, ನಿಮ್ಮ ಸಹಪಾಠಿಗಳು ಮತ್ತು ಶಿಕ್ಷಕರೊಂದಿಗೆ ಚರ್ಚಿಸಿ.
- ಈ ಪಕ್ಷಿಗಳ ಬಗ್ಗೆ ನಿಮಗೆ ಇನ್ನೂ ಹೆಚ್ಚಿನ ಪ್ರಶ್ನೆಗಳಿವೆಯೇ? ನಿಮ್ಮ ಹಿರಿಯರು ಅಥವಾ ಪ್ರಾಣಿ ಆರೋಗ್ಯ ಕಾರ್ಯಕರ್ತರು ಅಥವಾ ಪಶುವೈದ್ಯರೊಂದಿಗೆ ಮಾತನಾಡಿ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲು ಪ್ರಯತ್ನಿಸಿ. ನೀವು ನಿಮ್ಮ ಶಿಕ್ಷಕರ ಸಹಾಯವನ್ನೂ ಪಡೆಯಬಹುದು.

**ಕೊಡುಗೆ:**

**ರಾಧಾಗೋಪಾಲನ್,** ಇವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಾರೆ. ಇವರು ತೆಲಂಗಾಣದ ಕೂಡಲಿ ಇಂಟರ್ ಜನರೇಷನಲ್ ಲರ್ನಿಂಗ್ ಸೆಂಟರ್‌ನ ಸದಸ್ಯರೂ ಆಗಿದ್ದಾರೆ.

ಅನುವಾದ: **ಬಿ. ಆರ್. ಮಂಜುನಾಥ್** | ಪರಿಶೀಲನೆ: **ಯತಿರಾಜ್ ಶರ್ಮ**

# ನಿಮ್ಮ ಹಿತ್ತಲಿನ ಜೀವಜಗತ್ತು

## ಶಿಕ್ಷಕರ ಮಾರ್ಗದರ್ಶಿ: ಚಟುವಟಿಕೆ ಹಾಳೆಗಳು I ಮತ್ತು II

- ಚಟುವಟಿಕೆ ಹಾಳೆಗಳು I ಮತ್ತು II ಅನ್ನು 6 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ವಿನ್ಯಾಸಗೊಳಿಸಲಾಗಿದೆ.
- ಪ್ರತಿಯೊಂದು ಚಟುವಟಿಕೆಯನ್ನು 2-3 ದಿನಗಳಲ್ಲಿ ಮಾಡಬಹುದು. ಕೆಲವು ಕೆಲಸಗಳನ್ನು ತರಗತಿಯಲ್ಲಿ ಮಾಡಬಹುದು, ಇನ್ನು ಕೆಲವನ್ನು ತರಗತಿಯ ಹೊರಗೆ ಮಾಡಬೇಕಾಗುತ್ತದೆ.
- ಈ ಚಟುವಟಿಕೆಗಳನ್ನು ತರಗತಿಯಲ್ಲಿ ಈ ಕೆಳಗಿನಂತೆ ಪರಿಚಯಿಸಿ:

  ಎ) 'ಕಣ್ಮರೆಯಾಗುತ್ತಿರುವ ರಣಹದ್ದುಗಳು' ಲೇಖನವನ್ನು ನಿಮ್ಮ ವಿದ್ಯಾರ್ಥಿಗಳಿಗೆ ಓದಿ ಅಥವಾ ವಿವರಿಸಿ. ಅಲ್ಲದೆ, ವಿದ್ಯಾರ್ಥಿಗಳು ಈ ಕಥೆಯನ್ನು ತಮ್ಮ ಸಮುದಾಯಗಳಲ್ಲಿ ಚರ್ಚಿಸಲು ಮತ್ತು ಎಲ್ಲಾ ಜೀವಿಗಳು ಪರಸ್ಪರ ಹಾಗೂ ಪರಿಸರದ ಮೇಲೆ ಹೇಗೆ ಅವಲಂಬಿತವಾಗಿವೆ ಎಂಬುದರ ಬಗ್ಗೆ ಯೋಚಿಸಲು ಪ್ರೋತ್ಸಾಹಿಸಿ. ಇದು ಅವರ ಸುತ್ತಲಿರುವ ಎಲ್ಲಾ ಜೀವಿಗಳಿಗೆ (ನೋಡಲು ಭಯಾನಕವಾಗಿರುವವುಗಳನ್ನೂ ಸೇರಿ) ಇರುವ ಅಪಾಯ ಮತ್ತು ಅವುಗಳ ಅಳಿವು-ಉಳಿವುಗಳ ಬಗ್ಗೆ ಹೆಚ್ಚು ಅರಿಯಲು ಮತ್ತು ಸಂವೇದನಾಶೀಲರಾಗಲು ಸಹಾಯಮಾಡುತ್ತದೆ. ಇದರಿಂದ ಮಕ್ಕಳಲ್ಲಿ ಸಹಾನುಭೂತಿ ಮತ್ತು ಕರುಣೆ ಸಹಜವಾಗಿಯೇ ಮೂಡುತ್ತದೆ.

  ಬಿ) ನೀವು ' Vulture Trilogy, Past, Present and Future(URL: https://www.youtube.com/watch?v=LzgNe9uMgAs&t=49s) ಎಂಬ 22 ನಿಮಿಷಗಳ ಚಲನಚಿತ್ರವನ್ನು (ಪೂರ್ಣವಾಗಿ ಅಥವಾ ಕೆಲವು ಭಾಗಗಳನ್ನು) ತರಗತಿಯಲ್ಲಿ ತೋರಿಸಬಹುದು. ಇದನ್ನು ನಿಮ್ಮ ಮೊಬೈಲ್ ಫೋನಿನಲ್ಲಿಯೂ ತೋರಿಸಬಹುದು.

  ಸಿ) ಚಟುವಟಿಕೆ ಹಾಳೆ I ಕ್ಕೆ: ಸಾಧ್ಯವಾದರೆ, ರಣಹದ್ದುಗಳ ಚಿತ್ರಗಳನ್ನು ಕಂಪ್ಯೂಟರ್ ಪರದೆಯ ಮೇಲೆ ತೋರಿಸಿ. ಇದು ಸಾಧ್ಯವಾಗದಿದ್ದರೆ, ನೀವು ಚಿತ್ರಗಳನ್ನು ಪ್ರಿಂಟ್ ಮಾಡಿ, ಕಾರ್ಡ್‌ಬೋರ್ಡ್ ಅಥವಾ ಯಾವುದೇ ಗಟ್ಟಿಯಾದ ಮೇಲ್ಮೈಗೆ ಅಂಟಿಸಿ ತರಗತಿಯಲ್ಲಿ ಪ್ರದರ್ಶಿಸಬಹುದು.

  ಡಿ) ಚಟುವಟಿಕೆ ಹಾಳೆ II ಕ್ಕೆ: ರಣಹದ್ದುಗಳ ಬಗ್ಗೆ ನಿಮಗೆ ತಿಳಿದಿರುವ ಯಾವುದೇ ಸಣ್ಣ ಕಥೆಗಳು, ಸ್ಥಳೀಯ ಸಾಂಸ್ಕೃತಿಕ ಆಚರಣೆಗಳು ಅಥವಾ ನಂಬಿಕೆಗಳನ್ನು ನಿಮ್ಮ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳಿ, ಹಿರಿಯರು ಮತ್ತು ಸಮುದಾಯದ ಇತರರು ರಣಹದ್ದುಗಳ ಬಗ್ಗೆ ಹೇಳುವುದನ್ನು ಗಮನವಿಟ್ಟು ಕೇಳಲು ಮತ್ತು ಆ ವಿವರಗಳನ್ನು ತಮ್ಮ ನೋಟ್‌ಬುಕ್‌ಗಳಲ್ಲಿ ಎಚ್ಚರಿಕೆಯಿಂದ ದಾಖಲಿಸಲು ಅವರಿಗೆ ನೆನಪಿಸಿ. ಸಾಧ್ಯವಾದರೆ, ಚರ್ಚೆಗಾಗಿ ಪ್ರಾಣಿ ಆರೋಗ್ಯ ಕಾರ್ಯಕರ್ತರನ್ನು ಅಥವಾ ಸ್ಥಳೀಯ ಪಶುವೈದ್ಯರನ್ನು ತರಗತಿಗೆ ಆಹ್ವಾನಿಸಿ.

**ಮಾಧ್ಯಮಿಕ ಹಂತದ ವಿಜ್ಞಾನ ಪಠ್ಯಪುಸ್ತಕಗಳೊಂದಿಗೆ ಸಂಪರ್ಕಗಳು:**

ಈ ಚಟುವಟಿಕೆಗಳು ಮತ್ತು ಅವುಗಳ ಕುರಿತಾದ ಚರ್ಚೆಗಳನ್ನು ಮಾಧ್ಯಮಿಕ ಹಂತದ ವಿಜ್ಞಾನ ಪಠ್ಯಕ್ರಮದ ಈ ಕೆಳಗಿನ ಅಧ್ಯಾಯಗಳಿಗೆ ಜೋಡಿಸಬಹುದು:

- 6ನೇ ತರಗತಿಯ ವಿಜ್ಞಾನ ಪಠ್ಯಪುಸ್ತಕದ (ಎನ್.ಸಿ.ಇ.ಆರ್.ಟಿ., 2024-2025) ಅಧ್ಯಾಯ 2 ('ಜೀವಜಗತ್ತಿನಲ್ಲಿ ವೈವಿಧ್ಯತೆ'): ಇಲ್ಲಿ ವಿದ್ಯಾರ್ಥಿಗಳಿಗೆ ಆವಾಸ ಸ್ಥಾನಗಳ (ಪ್ರಾಣಿಗಳು ಮತ್ತು ಸಸ್ಯಗಳು ವಾಸಿಸುವ, ಆಹಾರ ಪಡೆಯುವ ಮತ್ತು ಆಶ್ರಯ ಪಡೆಯುವ ಸ್ಥಳಗಳು) ಪರಿಚಯ ಮಾಡಿಕೊಡಲಾಗುತ್ತದೆ. ಈ ಆವಾಸ ಸ್ಥಾನಗಳಲ್ಲಿ ಬದುಕಲು ಮತ್ತು ಉಳಿಯಲು ಪ್ರಾಣಿಗಳು ಹೊಂದಿರುವ ವಿಶೇಷಲಕ್ಷಣಗಳ (ಹೊಂದಾಣಿಕೆಗಳು) ಬಗ್ಗೆಯೂ ಅವರು ಕಲಿಯುತ್ತಾರೆ. ಅಧ್ಯಾಯದ ಕೊನೆಯಲ್ಲಿರುವ 'ನಮ್ಮ ಕಲಿಕೆಯನ್ನು ಹೆಚ್ಚಿಸೋಣ' ವಿಭಾಗದ ಚಟುವಟಿಕೆ 10ರಲ್ಲಿ, ವಿದ್ಯಾರ್ಥಿಗಳನ್ನು ಬಾತುಕೋಳಿಯ ಪಾದಗಳನ್ನು ವೀಕ್ಷಿಸಲು ಮತ್ತು ಈ ಪಾದಗಳು ಯಾವ ಕೆಲಸಕ್ಕೆ ಸಹಾಯ ಮಾಡುತ್ತವೆ ಎಂದು ಯೋಚಿಸಲು ಆಹ್ವಾನಿಸಲಾಗಿದೆ. ಈ ಚರ್ಚೆಯನ್ನು ರಣಹದ್ದುಗಳಿಗೂ ವಿಸ್ತರಿಸಲು ಚಟುವಟಿಕೆ ಹಾಳೆ I ಶಿಕ್ಷಕರಿಗೆ ಸಹಾಯ ಮಾಡುತ್ತದೆ. ಅದೇ ಅಧ್ಯಾಯದ 'ಮುಂದಿನ ಕಲಿಕೆ' ವಿಭಾಗದಲ್ಲಿ, ವಿದ್ಯಾರ್ಥಿಗಳು ತಮ್ಮ ಕುಟುಂಬ ಅಥವಾ ನೆರೆಹೊರೆಯ ಹಿರಿಯರೊಂದಿಗೆ ಮಾತನಾಡಿ, ಅವರು ಹಿಂದೆ ನೋಡಿದ್ದ ಆದರೆ ಈಗ ಕಾಣದ ಪ್ರಾಣಿಗಳ ಬಗ್ಗೆ ತಿಳಿಯಲು ಸೂಚಿಸಲಾಗಿದೆ. ಇದನ್ನು ರಣಹದ್ದುಗಳ ವಿಷಯದಲ್ಲಿ ಮಾಡಲು ಚಟುವಟಿಕೆ ಹಾಳೆ II ಸಹಾಯ ಮಾಡುತ್ತದೆ.
- 8ನೇ ತರಗತಿಯ ವಿಜ್ಞಾನ ಪಠ್ಯಪುಸ್ತಕದ (ಎನ್.ಸಿ.ಇ.ಆರ್.ಟಿ., 2024-2025) ಅಧ್ಯಾಯ 5 ('ಸಸ್ಯ ಮತ್ತು ಪ್ರಾಣಿಗಳ ಸಂರಕ್ಷಣೆ'): ಇಲ್ಲಿ ವಿದ್ಯಾರ್ಥಿಗಳಿಗೆ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳನ್ನು ಪರಿಚಯಿಸಲಾಗಿದೆ. ಆವಾಸ

ಸ್ಥಾನಗಳಲ್ಲಿನ ಬದಲಾವಣೆಗಳಿಂದಾಗಿ (ಮಾನವ ಚಟುವಟಿಕೆಗಳಿಂದ ಉಂಟಾಗುವ ಅರಣ್ಯನಾಶದಂತಹ) ಉಂಟಾಗುವ ಪ್ರಾಣಿಗಳ ಅಳಿವು ಸಹ ಇದರಲ್ಲಿ ಸೇರಿದೆ. 'ಕಣ್ಮರೆಯಾಗುತ್ತಿರುವ ರಣಹದ್ದುಗಳು' ಲೇಖನ ಮತ್ತು ಚಟುವಟಿಕೆ ಹಾಳೆ II, ಅರಣ್ಯ ನಾಶದ ಹೊರತಾಗಿ ಪ್ರಾಣಿಗಳ ಜೀವಕ್ಕೆ ಅಪಾಯ ತಂದೊಡ್ಡುವ ಇತರ ಅಂಶಗಳನ್ನು ಎತ್ತಿತೋರಿಸುತ್ತವೆ. ವನ್ಯಜೀವಿಧಾಮಗಳು ಹುಲಿ, ಸಿಂಹ ಮತ್ತು ಆನೆಗಳಂತಹ ದೊಡ್ಡಪ್ರಾಣಿಗಳನ್ನು ಸಂರಕ್ಷಿಸಲು ಹೇಗೆ ಸಹಾಯ ಮಾಡುತ್ತವೆ ಎಂಬುದರ ಬಗ್ಗೆಯೂ ವಿದ್ಯಾರ್ಥಿಗಳು ಓದುತ್ತಾರೆ. ರಣಹದ್ದುಗಳನ್ನು ಏಕೆ ಸಂರಕ್ಷಿಸಬೇಕು ಮತ್ತು ರಣಹದ್ದು ಧಾಮಗಳು ಇದರಲ್ಲಿ ಯಾವ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ಚರ್ಚಿಸಲು ಶಿಕ್ಷಕರು ಈ ವಿಷಯವನ್ನು ಬಳಸಿಕೊಳ್ಳಬಹುದು. 2

- 8ನೇ ತರಗತಿಯ ವಿಜ್ಞಾನ ಪಠ್ಯಪುಸ್ತಕದ (ಎನ್.ಸಿ.ಇ.ಆರ್.ಟಿ., 2025-2026) ಅಧ್ಯಾಯ 2 ('ಅದೃಶ್ಯ ಜೀವಜಗತ್ತು: ಬರಿಗಣ್ಣಿಗೆ ಕಾಣದ ಲೋಕ'): ಇಲ್ಲಿ ವಿದ್ಯಾರ್ಥಿಗಳಿಗೆ ರೋಗಾಣುಗಳು, ರೋಗಹರಡುವಿಕೆ ಮತ್ತು ಸತ್ತ ಸಸ್ಯ ಹಾಗೂ ಪ್ರಾಣಿಗಳ ಕೊಳೆಯುತ್ತಿರುವ ಸಾವಯವ ಪದಾರ್ಥಗಳನ್ನು ವಿಘಟಿಸುವ ಮತ್ತು ಮರುಬಳಕೆ ಮಾಡುವ ವಿಘಟಕಗಳಾಗಿ ಸೂಕ್ಷ್ಮಜೀವಿಗಳ ಪಾತ್ರದ ಬಗ್ಗೆ ಪರಿಚಯಿಸಲಾಗಿದೆ. ಕೊಳೆಯುವ ಪ್ರಕ್ರಿಯೆಯಲ್ಲಿ ರಣಹದ್ದುಗಳು ಮತ್ತು ಸೂಕ್ಷ್ಮಜೀವಿಗಳು ವಹಿಸುವ ಪಾತ್ರಗಳನ್ನು ಹೋಲಿಸಲು ಶಿಕ್ಷಕರು ವಿದ್ಯಾರ್ಥಿಗಳನ್ನು ಆಹ್ವಾನಿಸಬಹುದು. ರೋಗ ಹರಡುವುದನ್ನು ತಡೆಯುವಲ್ಲಿ ರಣಹದ್ದುಗಳು ವಹಿಸುವ ಪಾತ್ರದ ಬಗ್ಗೆ ಚರ್ಚಿಸಲು ಸಹ ಇದನ್ನು ಬಳಸಬಹುದು.

ಪರಾಮರ್ಶನ:

1. National Council of Educational Research and Training (Reprint 2025-2026). 'Chapter 2: Diversity in the Living World'. Curiosity, Textbook of Science for Grade VI: 9-34. URL: https://ncert.nic.in/textbook.php?fecu1=2-12
2. National Council of Educational Research and Training (2024-2025). 'Chapter 5: Conservation of Plants and Animals'. Science Textbook for Grade VIII: 53-65. URL: https://ncert.nic.in/textbook/pdf/hesc105.pdf
3. National Council of Educational Research and Training (2025-2026). 'Chapter 2: The Invisible Living World: Beyond Our Naked Eye'. Curiosity, Textbook of Science for Grade VIII: 8-27. URL: https://ncert.nic.in/textbook.php?hecu1=2-13

ಐ ವಂಡರ್...
ರೀಡಿಸ್ಕವರಿಂಗ್ ಸ್ಕೂಲ್ ಸೈನ್ಸ್

**ಕೊಡುಗೆ:**

**ರಾಧಾಗೋಪಾಲನ್,** ಇವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಾರೆ. ಇವರು ತೆಲಂಗಾಣದ ಕೂಡಲಿ ಇಂಟರ್ ಜನರೇಷನಲ್ ಲರ್ನಿಂಗ್ ಸೆಂಟರ್‌ನ ಸದಸ್ಯರೂ ಆಗಿದ್ದಾರೆ.

ಅನುವಾದ: **ಬಿ. ಆರ್. ಮಂಜುನಾಥ್** | ಪರಿಶೀಲನೆ: **ಯತಿರಾಜ್ ಶರ್ಮ**